ಆರ್. ವಿಜಯರಾಘವನ್

# ಮಗನನ್ನು ಕೇಳಿದ ನರಿಯ ಕತೆ

ಒಂದು ದಿನ ಕಾಡಿನಂಚಿನಲ್ಲಿ ಇದ್ದ ಗುಳ್ಳೆ ನರಿಯ ಪಾದಕ್ಕೆ ಮುಳ್ಳು ಚುಚ್ಚಿಕೊಂಡಿತು. ಅದರಿಂದ ಅದಕ್ಕೆ ತುಂಬಾ ನೋವಾಯಿತು. ಅಯ್ಯೋ ಅಯ್ಯೋ ಎಂದು ಅದು ಅತ್ತುಕೊಂಡು ಕುಂಟುಕೊಂಡು ದಾರಿಯಲ್ಲಿ ಹೋಗುತ್ತಿತ್ತು. ಆಗ ಅದಕ್ಕೆ ದಾರಿಯ ಬದಿ ಕುಳಿತಿದ್ದ ಒಬ್ಬ ಮುದುಕಿ ಕಂಡುಬಂದಳು. ನರಿ ಅವಳ ಬಳಿ ಹೋಗಿ ಅಜ್ಜೀ, ಅಜ್ಜೀ ನನ್ನ ಪಾದಕ್ಕೆ ತಗುಲಿರುವ ಮುಳ್ಳು ತೆಗೆಯಜ್ಜೀ ಎಂದು ಬೇಡಿಕೊಂಡಿತು. ಅಜ್ಜಿ ಆಗಲಿ ಬಾ ಎಂದು ಅದರ ಪಾದಕ್ಕೆ ಚುಚ್ಚಿಕೊಂಡಿದ್ದ ಮುಳ್ಳನ್ನು ತೆಗೆದುಹಾಕಿದಳು. ನರಿ ಅವಳಿಗೆ ಧನ್ಯವಾದ ಹೇಳಿ ಹೊರಟುಹೋಯಿತು.

ಆದರೆ ಸ್ವಲ್ಪ ಹೊತ್ತಿನಲ್ಲೇ ಅದು ಅವಳ ಬಳಿಗೆ ಮರಳಿ ಬಂದು ಅಜ್ಜೀ ಅಜ್ಜೀ, ನನ್ನ ಮುಳ್ಳೆಲ್ಲಿ ಎಂದು ಕೇಳಿತು. ಅಜ್ಜಿ ಎಲ್ಲಿಯ ಮುಳ್ಳೋ, ಯಾರಿಗೆ ಬೇಕೋ ಅದು ಅಪ್ಪಾ, ಅದನ್ನಾಗಲೇ ಬಿಸಾಕಿ ಆಯಿತಲ್ಲ ಎಂದಳು. ಆ ಮಾತು ಕೇಳಿ ನರಿ ನನ್ನ ಮುಳ್ಳು, ನನ್ನ ಮುಳ್ಳು, ನನಗದು ಬೇಕು ಎಂದು ಜೋರಾಗಿ ಅಳತೊಡಗಿತು. ಅಜ್ಜಿಗೆ ಮುಳ್ಳನ್ನು ಬಿಸಾಡಿದ್ದಕ್ಕೆ ತುಂಬಾ ಬೇಸರವಾಯಿತು. ಹೋಗಲಿ ಬಿಡು. ಅದರ ಬದಲಿಗೆ ಇದನ್ನು ಕೊಡುತೀನಿ ಎಂದು ತನ್ನಲ್ಲಿದ್ದ ಒಂದು ಮೊಟ್ಟೆಯನ್ನು ಕೊಟ್ಟಳು. ನರಿ ಮೊಟ್ಟೆಯನ್ನೆತ್ತಿಕೊಂಡು ಓಡಿಹೋಯಿತು.

ಓಡಿ ಓಡಿ ಅದು ಒಂದೂರಿಗೆ ಬಂದಿತು. ಅಲ್ಲಿ ಸಿಕ್ಕ ಮೊದಲ ಮನೆಗೆ ಹೋಗಿ ಬಾಗಿಲು ಬಡಿಯಿತು. ಒಳಗಿದ್ದ ಮನೆಯ ಒಡೆಯ ಬಾಗಿಲು ತೆರೆದ. ಒಡನೆ ನರಿ ಅಪ್ಪಾ, ಸತ್ಪುರುಷನೇ, ಈ ರಾತ್ರಿ ನಾನು ನಿಮ್ಮ ಮನೆಯಲ್ಲಿರಲೇ? ಹೊರಗೆ ಕತ್ತಲಾಗಿದೆ, ಚಳಿ ಬೇರೆ ಭಯಂಕರವಾಗಿದೆ ಎಂದು ಕೇಳಿತು. ದಯವಿಟ್ಟು ಬನ್ನಿ ಎಂದು ಅವನು ನರಿಯನ್ನು ಒಳಗೆ ಕರೆದುಕೊಂಡ. ಒಳಗೆ ಬಂದ ನರಿ ಈ ಮೊಟ್ಟೆಯನ್ನು ಈ ತಟ್ಟೆಯಲ್ಲಿಡಲೇ ಎಂದು ಕೇಳಿತು. ಅವನು ಹಾಗೆಯೇ ಆಗಲಿ ಎಂದ.

ರಾತ್ರಿ ಎಲ್ಲರೂ ನಿದ್ರಿಸುತ್ತಿರುವಾಗ ನರಿ ಎದ್ದು ಆ ಮೊಟ್ಟೆಯನ್ನು ತಿಂದು ಹಾಕಿ ಸಿಪ್ಪೆಯನ್ನು ಆ ತಟ್ಟೆಯಲ್ಲೇ ಬಿಟ್ಟು ಗುಮಾನಿ ಬರದಂತೆ ಮಲಗಿಕೊಂಡಿತು. ಬೆಳಗ್ಗೆ ಎದ್ದು ಮನೆಯಾತನನ್ನು ತನ್ನ ಮೊಟ್ಟೆ ಎಲ್ಲೆಂದು ಕೇಳಿತು. ಮನೆಯೊಡೆಯ ನನಗೆ ಗೊತ್ತಿಲ್ಲ ಎಂದ. ನರಿ ನನ್ನ ದೊಡ್ಡ ಮೊಟ್ಟೆ, ನನ್ನ ದೊಡ್ಡ ಮೊಟ್ಟೆ, ನನಗದು ಬೇಕು ಎಂದು ಜೋರಾಗಿ ಅಳತೊಡಗಿತು. ಅವನಿಗೆ ತುಂಬಾ ಬೇಸರವಾಯಿತು. ಹೋಗಲಿ ಬಿಡು. ಅದರ ಬದಲಿಗೆ ಇದನ್ನು ಕೊಡುತೀನಿ ಎಂದು ತನ್ನಲ್ಲಿದ್ದ ಒಂದು ಕೋಳಿಯನ್ನು ಕೊಟ್ಟ. ನರಿ ಕೋಳಿಯನ್ನೆತ್ತಿಕೊಂಡು ಓಡಿ ಹೋಯಿತು.

ಓಡಿ ಓಡಿ ಅದು ಸಂಜೆಯ ವೇಳೆಗೆ ಇನ್ನೊಂದೂರಿಗೆ ಬಂದಿತು. ಅಲ್ಲಿ ಸಿಕ್ಕ ಮೊದಲ ಮನೆಗೆ ಹೋಗಿ ಬಾಗಿಲು ಬಡಿಯಿತು. ಒಳಗಿದ್ದ ಮನೆಯ ಹೆಂಗಸು ಬಾಗಿಲು ತೆರೆದಳು. ಒಡನೆ ನರಿ ಅಮ್ಮಾ, ತಾಯೇ, ಈ ರಾತ್ರಿ ನಾನು ನಿಮ್ಮ ಮನೆಯಲ್ಲಿರಲೇ? ಹೊರಗೆ ಕತ್ತಲಾಗಿದೆ, ಚಳಿ ಬೇರೆ ಭಯಂಕರವಾಗಿದೆ ಎಂದು ಕೇಳಿತು. ಬಾ ಬಾ ಎಂದು ಅವಳು ನರಿಯನ್ನು ಒಳಗೆ ಕರೆದುಕೊಂಡಳು. ಒಳಗೆ ಬಂದ ನರಿ ಅಮ್ಮಾ, ಈ ಕೋಳಿಯನ್ನು ಈ ರಾತ್ರಿ ಎಲ್ಲಿಡಲಿ ಎಂದು ಕೇಳಿತು. ಆಕೆ ಅದನ್ನು ನನ್ನ ಮೇಕೆಯ ಹತ್ತಿರ ಬಿಡು. ರಾತ್ರಿ ಅದು ಅಲ್ಲಿರಲಿ ಎಂದಳು.

ರಾತ್ರಿ ಎಲ್ಲರೂ ನಿದ್ರಿಸುತ್ತಿರುವಾಗ ನರಿ ಎದ್ದು ಮೇಕೆಯ ಬಳಿ ಹೋಗಿ ಆ ಕೋಳಿಯನ್ನು ತಿಂದು ಹಾಕಿತು. ಗುಮಾನಿ ಬರದಂತೆ ಮಲಗಿಕೊಂಡಿತು. ಬೆಳಗ್ಗೆ ಎದ್ದು ಮನೆಯಾಕೆಯನ್ನು ತನ್ನ